## ಮಧ್ಯಂತರ ಅರ್ಜಿ 1 ರ ಮೇಲೆ ಆದೇಶ

ಸದರಿ ಅರ್ಜಿದಾರರ ಪರವಾಗಿ ಓ.ಎಸ್.ನಂ.30/2014 ರ ದಿನಾಂಕ 20-9-2017 ರ ಪ್ರಾಥಮಿಕ ತೀರ್ಪು ಹಾಗೂ ಡಿಕ್ರಿಯ ಪ್ರಕಾರ ದಾವಾಸ್ತಿಗಳನ್ನು ನ್ಯಾಯಾಲಯದ ಆಯುಕ್ತರ ಮುಖಾಂತರ ವಿಭಾಗಿಸಿ, ಅದರಲ್ಲಿನ 1/2 ನೇ ಅಂಶವನ್ನು ಅರ್ಜಿದಾರರ ಹಿಸ್ಸೆಗೆ ನೀಡುವಂತೆ ಕೋರಿ ಅಂತಿಮ ಡಿಕ್ರಿಗಾಗಿ ಸಲ್ಲಿಸಿರುತ್ತಾರೆ.

2. ದಾವಾಸ್ತಿಗಳಲ್ಲಿನ ಅರ್ಜಿದಾರರ ಹಿಸ್ಸೆಯನ್ನು ವಿಭಾಗಿಸಲು ನ್ಯಾಯಾಲಯದ ಆಯುಕ್ತರನ್ನು ನೇಮಿಸಬೇಕೆಂದು ಶ್ರೀ ಎಸ್.ಕೆ.ಪಿ ವಕೀಲರು ವಾದ ಮಂಡಿಸಿರುತ್ತಾರೆ.

3. ನೋಟಿಸು ಜಾರಿಯಾದ ನಂತರ 1 ಮತ್ತು 2 ನೇ ಎದುರುದಾರರು ಗೈರು ಹಾಜರಾಗಿರುತ್ತಾರೆ.

4. ವಕೀಲರ ವಾದ ಆಲಿಸಲಾಯಿತು.

5. ನ್ಯಾಯಾಲಯದ ಮುಂದಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

6. ಸದರಿ ದಾವಾಸ್ತಿಗಳು ಕೃಷಿ ಭೂಮಿಗಳಾಗಿದ್ದರಿಂದ ದಾವಾಸ್ತಿ ಜಮೀನುಗಳನ್ನು ವಿಭಾಗಿಸಬೇಕಾಗಿದ್ದಲ್ಲಿ ಸರ್ವೆ ಅಳತೆಯ ಮುಖಾಂತರ ಅಳತೆಪಡಿಸಿ ಪಕ್ಷಕಾರರ ಹಿಸ್ಸೆಯ ಅನುಸಾರವಾಗಿ ವಿಂಗಡಿಸಲು ಭೂಮಾಪಕರನ್ನು ನೇಮಿಸುವ ಅವಶ್ಯಕತೆ ಇರುತ್ತದೆ ಎಂದು ನ್ಯಾಯಾಲಯದ ಗಮನಕ್ಕೆ ಕಂಡುಬಂದಿರುತ್ತದೆ. ಅಲ್ಲದೇ ಅರ್ಜಿಯು ಎದುರುದಾರರಿಗೆ ಜಾರಿಯಾಗಿದ್ದು, ಗೈರು ಹಾಜರಾಗಿದ್ದರಿಂದ ಪ್ರಾಥಮಿಕ ಡಿಕ್ರಿಯ ಪ್ರಕಾರ ದಾವಾಸ್ತಿಗಳನ್ನು ವಿಂಗಡಿಸಲು ಯಾವುದೇ ತಕರಾರು ಇರುವುದಿಲ್ಲವೆಂಬುದು ಕಂಡುಬರುತ್ತದೆ. ಆದ್ದರಿಂದ ಸದರಿ ಪ್ರಾಥಮಿಕ ಡಿಕ್ರಿಯ ಪ್ರಕಾರ ದಾವಾಸ್ತಿಗಳನ್ನು ವಿಭಾಗಿಸಲು ಎದುರುದಾರರ ಯಾವುದೇ ಆಕ್ಷೇಪಣೆ ವ ತಕರಾರು ಇರುವುದಿಲ್ಲವೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬಂದಿರುತ್ತದೆ. ಅಲ್ಲದೇ ಸದರಿ ಓ.ಎಸ್.ನಂ.30/2014 ರ ದಿನಾಂಕ 20-9-2017 ರ ತೀರ್ಪು ಹಾಗೂ ಡಿಕ್ರಿಗೆ ಮೇಲ್ಮನವಿ ನ್ಯಾಯಾಲಯದ ಯಾವುದೇ ತಡೆಯಾಜ್ಞೆ ಇರುವುದಿಲ್ಲ. ಅಲ್ಲದೆ ಸದರಿ ಅಂತಿಮ ಡಿಕ್ರಿಯ ಪ್ರಕ್ರಿಯೆಗೆ ಯಾವುದೇ ತಡೆಯಾಜ್ಞೆ ಇರುವುದಿಲ್ಲ. ಆದ್ದರಿಂದ ಸದರಿ ಪ್ರಾಥಮಿಕ ಡಿಕ್ರಿಯ ಅನುಷ್ಠಾನಕ್ಕಾಗಿ ಅಂತಿಮ ಡಿಕ್ರಿಗೆ ಯಾವುದೇ ಅಡೆ - ತಡೆ ಇರುವುದಿಲ್ಲ. ಸದರಿ ಅಂಶಗಳನ್ನು ಪರಿಗಣಿಸಿ, ಈ ಕೆಳಕಂಡಂತೆಃ

## ಆದೇಶ

ಸದರಿ ದಾವಾಸ್ತಿಗಳನ್ನು ಅಫಜಲಪೂರದ ದಿವಾಣಿ ನ್ಯಾಯಾಲಯದ ಓ.ಎಸ್.ನಂ.30/2014 ರ ದಿನಾಂಕ 20-9-2017 ರಂದು ಆದಂತಹ ತೀರ್ಪು ಹಾಗೂ ಪ್ರಾಥಮಿಕ ಡಿಕ್ರಿಯ ಪ್ರಕಾರ ದಾವಾಸ್ತಿ ಜಮೀನನ್ನು ವಿಭಾಗಿಸಲು ತಾಲೂಕು ಭೂ ಮಾಪಕರನ್ನು ನ್ಯಾಯಾಲಯದ ಆಯುಕ್ತರನ್ನಾಗಿ ನೇಮಿಸಲಾಗಿದೆ.

ಸದರಿ ನ್ಯಾಯಾಲಯದ ಆಯುಕ್ತರ/ಸರ್ವೇಯರ ಫೀ ರೂ.300-00 ನಿಗದಿಪಡಿಸಲಾಗಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಅಫಜಲಪೂರ